## ಗ್ರಾಮ ಪಂಚಾಯತಿಗಳು ಆಸ್ತಿಗಳಿಗೆ ಸಂಬಂಧಿಸಿದಂತೆ ವಿತರಿಸುವ ನಮೂನೆ 9 ಮತ್ತು 11 ರ ಬಗ್ಗೆ ಸಾರ್ವಜನಿಕರ ಪ್ರಶ್ನೆಗಳಿಗೆ ಉತ್ತರ

**1. ನಮೂನೆ 9 ಎಂದರೇನು ?**

ಉತ್ತರ: ಕರ್ನಾಟಕ ಪಂ.ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಮತ್ತು ತಿದ್ದುಪಡಿ ನಿಯಮಗಳು, 2013 ರನ್ವಯ ನಿಯಮ 28 ರನ್ವಯ ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿರುವ ಕೃಷಿಯೇತರ ಆಸ್ತಿಗಳಿಗೆ ದಾಖಲೆಗಳನ್ನು ಒದಗಿಸುವುದು. ನಮೂನೆ 9 ಆಗಿರುತ್ತದೆ. ನಮೂನೆ 9 ನ್ನು ತೆರಿಗೆ ನಿರ್ಧರಣೆ ಪಟ್ಟಿ ವಹಿ ಎಂತಲು ಕರೆಯಲಾಗುವುದು. ನಮೂನೆ 9 ರ ವಹಿಯು ಕಟ್ಟಡಗಳು ಮತ್ತು ಕೃಷಿಯೇತರ ಭೂಮಿಗಳ ತೆರಿಗೆ ನಿರ್ಧರಣೆಗಳನ್ನು ಮಾಡುವುದು. ಗ್ರಾಮ ಪಂಚಾಯತಿಯು ಈ ಕೆಳಗಿನ ಸಂದರ್ಭಗಳಲ್ಲಿ ಮಾತ್ರ ನಮೂನೆ 9 ನ್ನು ಆಸ್ತಿಗಳಿಗೆ ವಿತರಿಸಬಹುದು.

1) ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರನ್ವಯ ಸಂಬಂಧಿಸಿದ ಕಂದಾಯ ಇಲಾಖೆಯ ಕಛೇರಿ, ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಹಾಗೂ ಇದಕ್ಕೆ ಪೂರಕವಾದ ನಿಯಮಾವಳಿಗಳನ್ವಯ ಸಂಬಂಧಿಸಿದ ಸಕ್ಷಮ ಯೋಜನಾ ಪ್ರಾಧಿಕಾರವು ಪರಿವರ್ತನೆಗೊಳಿಸಿದ ಜಮೀನಿನಲ್ಲಿ ಅನುಮೋದಿತ ಬಡಾವಣೆಯಲ್ಲಿ ಸೃಜಿಸಲಾದ ಆಸ್ತಿ.

2) ಬಸವ ವಸತಿ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ, ಇಂದಿರಾ ಆವಾಸ್ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ವಸತಿ ಇಲಾಖೆಯು ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಎಚ್‌ಡಿ 55 ಹೆಚ್‌ಎಎಸ್ 2011, ದಿನಾಂಕ:30-01-2012 ರಂತೆ ಸೃಜಿಸುವ ಆಸ್ತಿ.

3) ಒಂದು ಆಸ್ತಿಯು ಗ್ರಾಮಠಾಣಾ ವ್ಯಾಪ್ತಿಯ ಒಳಗಿರುವ ಆಸ್ತಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ರವರು ನೀಡುವ ಕಚ್ಚಾ ನಕ್ಷೆ (Rough Sketch) ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 174 ಮುನೋಮು 2005, ದಿನಾಂಕ:23-08-2005 ಮತ್ತು ಸಂಖ್ಯೆ: ಆರ್‌ಡಿ 146 ಎಎಸ್‌ಡಿ 2013, ದಿನಾಂಕ:14-06-2013.

**2. ನಮೂನೆ 11 ಎಂದರೇನು ?**

ಉತ್ತರ: ಕರ್ನಾಟಕ ಪಂ.ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಮತ್ತು ತಿದ್ದುಪಡಿ ನಿಯಮಗಳು, 2013 ರನ್ವಯ ನಿಯಮ 30 ರನ್ವಯ ಗ್ರಾಮ ಪಂಚಾಯತಿಯು ತನ್ನ ವ್ಯಾಪ್ತಿಯಲ್ಲಿರುವ ಕೃಷಿಯೇತರ ಆಸ್ತಿಗಳಿಗೆ ವಿತರಿಸುವ ನಮೂನೆಯೇ ನಮೂನೆ 11 ನಮೂನೆ 11 ನ್ನು ಭೂಮಿ ಮತ್ತು ಕಟ್ಟಡಗಳ ಬೇಡಿಕೆ, ವಸೂಲಿ ಮತ್ತು ಬಾಕಿಗಳ ವಹಿ ಎಂತಲು ಸಹ ಕರೆಯಲಾಗುವುದು.

**3. ನಮೂನೆ 9 ಮತ್ತು 11 ನ್ನು ಏತಕ್ಕಾಗಿ ಉಪಯೋಗಿಸಲಾಗುವುದು ?**

ಉತ್ತರ: ತೆರಿಗೆ ನಿರ್ಧರಿಸಲು, ವಸೂಲಿ ಮಾಡಲು ನಮೂನೆ 9 ಮತ್ತು 11 ಗ್ರಾಮ ಪಂಚಾಯತಿಗಳಿಗೆ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಕರ್ನಾಟಕ ಪಂ.ರಾಜ್ ಅಧಿನಿಯಮ, 1993 ರ ಪ್ರಕರಣ 199 ರನ್ವಯ ಗ್ರಾಮ ಪಂಚಾಯತಿಗಳು ಸ್ಥಳೀಯ ಸ್ವಯಂ ಸರ್ಕಾರಗಳಾಗಿದ್ದು, ಕರಗಳನ್ನು ವಸೂಲಿ ಮಾಡಲು ಪ್ರದತ್ತ ಅಧಿಕಾರವನ್ನು ಪಡೆದಿವೆ. ಸುತ್ತೋಲೆ ಸಂಖ್ಯೆ ಆರ್‌ಡಿ 344 ಮುನೋಮು

2005 ದಿನಾಂಕ:06–04–2009 ರನ್ವಯ ನಮೂನೆ 9 ಮತ್ತು 11 ನ್ನು ಕಂದಾಯ ಇಲಾಖೆಯು 2013 ರಲ್ಲಿ ತಿದ್ದುಪಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಕೃಷಿಯೇತರ ಆಸ್ತಿಗಳ ನೋಂದಣಿಗೆ ಈ ದಾಖಲೆಗಳನ್ನು ಕಡ್ಡಾಯಗೊಳಿಸಿದೆ. ತಮ್ಮ ಆಸ್ತಿಗಳನ್ನು ಮಾರಾಟ ಮಾಡಲು ಬಯಸುವ ಸಾರ್ವಜನಿಕರು ನಮೂನೆ 9 ಮತ್ತು 11 ನ್ನು ಪಡೆಯಲು ಗ್ರಾಮ ಪಂಚಾಯತಿಗಳಿಗೆ ಅರ್ಜಿ ಸಲ್ಲಿಸಬೇಕಿದೆ.

**4. ಗ್ರಾಮ ಪಂಚಾಯತಿಗಳಲ್ಲಿ ನಮೂನೆ 9 ನ್ನು ಪಡೆಯಲು ಸಲ್ಲಿಸಬೇಕಾಗಿರುವ ಅರ್ಜಿಯು ಹೇಗಿರಬೇಕು ?**

ಉತ್ತರ: ಗ್ರಾಮ ಪಂಚಾಯತಿಗಳಲ್ಲಿ ನಮೂನೆ 9 ನ್ನು ಪಡೆಯಲು ಈ ಕೆಳಕಾಣಿಸಿದ ವಿವರಗಳಂತೆ ಅರ್ಜಿಯನ್ನು ಸಲ್ಲಿಸತಕ್ಕದ್ದು, ಕೆಳಕಂಡ ದಾಖಲಾತಿಗಳು ಅತ್ಯಗತ್ಯವಾಗಿ ಬೇಕಾಗಿದ್ದು, ಅರ್ಜಿದಾರನಿಂದ ಸಲ್ಲಿಕೆಯಾಗುವುದು.

(a) ಆಸ್ತಿಯು ಗ್ರಾಮಠಾಣಾ ವ್ಯಾಪ್ತಿಯೊಳಗೆ ಬರುವುದರ ಬಗ್ಗೆ ದೃಢೀಕರಣ.
   (1) ತಹಶೀಲ್ದಾರ್ ರವರು ದೃಢೀಕರಿಸಿದ ಆಸ್ತಿಯ ಕಚ್ಚಾ ನಕ್ಷೆ (Rough Sketch)

(b) ಪರಿವರ್ತಿತ ಆಸ್ತಿಯಾಗಿದ್ದಲ್ಲಿ ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಅನುಬಂಧದಲ್ಲಿ ಲಗತ್ತಿಸುವುದು.
   (1) ಮಾಲೀಕತ್ವದ ದಾಖಲೆಗಳು ಮತ್ತು ಕಂದಾಯ ಇಲಾಖೆಯು ವಿತರಿಸಿರುವ ಭೂ ಪರಿವರ್ತನೆ ಆದೇಶ.
   (2) ಮಾಲೀಕತ್ವದ ದಾಖಲೆಗಳು ಮತ್ತು ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಯೋಜನಾ ಪ್ರಾಧಿಕಾರದಿಂದ ಅನುಮೋದಿಸಲಾದ ಲೇಔಟ್ ಪ್ಲಾನ್.
   (3) ಆಸ್ತಿಯು ಸರ್ಕಾರದ ವಸತಿ ಯೋಜನೆಯಡಿ ಮಂಜೂರಾಗಿದ್ದರೆ ಬಸವ ವಸತಿ, ಆಶ್ರಯ, ಇಂದಿರಾ ಆವಾಸ್ ಯೋಜನಾ ಈ ಕೆಳಕಂಡ ಅವಶ್ಯ ದಾಖಲೆಗಳನ್ನು ಲಗತ್ತಿಸುವುದು. ಸಕ್ಷಮ ಪ್ರಾಧಿಕಾರವು ಹಕ್ಕು ಪತ್ರ ವಿತರಿಸಿರುವುದು ಮತ್ತು ಮಂಜೂರಾತಿ ಆದೇಶ. 3 ವರ್ಗದ ಈ ಕೆಳಕಂಡ ದಾಖಲೆಗಳನ್ನು ಅವಶ್ಯಕವಾಗಿ ಲಗತ್ತಿಸುವುದು.
      1) ಅರ್ಜಿದಾರನ ಭಾವಚಿತ್ರ ಮತ್ತು ಯಾವುದಾದರೂ ಗುರುತಿನ ಚೀಟಿ ಮತ್ತು ವಿಳಾಸಕ್ಕಾಗಿ ಪಡಿತರ ಚೀಟಿ, ಆಧಾರ್ ಕಾರ್ಡ್, ಪಾನ್ ಕಾರ್ಡ್.

**5. ನಮೂನೆ 9 ನ್ನು ವಿತರಿಸಲು ಗ್ರಾಮ ಪಂಚಾಯತಿಯು ತೆಗೆದುಕೊಳ್ಳುವ ಅವಧಿ ?**

ಉತ್ತರ: ಈ ಸೇವೆಯನ್ನು ಸಕಾಲದಡಿಯಲ್ಲಿ ತರಲಾಗಿ ದಿನಾಂಕ:01–04–2011 ರಂದು ಅನ್ವಯವಾಗುವಂತೆ ಗ್ರಾಮ ಪಂಚಾಯತಿಯು ನಮೂನೆ 9 ನ್ನು ವಿತರಿಸಲು 45 ದಿವಸಗಳ ಅವಧಿಯನ್ನು ತೆಗೆದುಕೊಳ್ಳುವುದು (ತೆರಿಗೆ ನಿರ್ಧರಣೆ ಪಟ್ಟಿ)

**6. ನಮೂನೆ 9 ಮತ್ತು 11 ನ್ನು ವಿತರಿಸಲು ನಿರ್ಬಂಧಗಳು ಏನಾದರೂ ಇರುವುದೇ ?**

ಉತ್ತರ: ಹೌದು. ಕೆಳಕಾಣಿಸಿದ ಸಂದರ್ಭಗಳಲ್ಲಿ ಮಾತ್ರ ನಮೂನೆ 9 ನ್ನು ಆಸ್ತಿಗಳಿಗೆ ಎದುರಾಗಿ ವಿತರಿಸಲಾಗುವುದು.

1) ಗ್ರಾಮಠಾಣಾ ನಿವೇಶನ
2) ಸಕ್ಷಮ ಯೋಜನಾ ಪ್ರಾಧಿಕಾರದಿಂದ ಲೇಔಟ್ ಪ್ಲಾನ್ ಅನುಮೋದನೆಯೊಂದಿಗೆ ಸೃಜಿಸಲಾದ ನಿವೇಶನ.

3) ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಮಂಜೂರಾದ ನಿವೇಶನ

ನಮೂನೆ 11 ನ್ನು ನಮೂನೆ 9 ರಡಿ ಬರುವ ಆಸ್ತಿಗಳಿಗೂ ಸಹ ವಿತರಿಸಬಹುದು. ಅಲ್ಲದೆ ಯಾವ ಆಸ್ತಿಗಳು ಮೇಲಿನ 3 ಅಂಶಗಳಿಗೆ ಅನ್ವಯವಾಗುವುದಿಲ್ಲವೋ ಅಂತಹ ಆಸ್ತಿಗಳು ಈಗಾಗಲೇ ತೆರಿಗೆ ನಿರ್ಧರಣೆ ವಹಿಯಲ್ಲಿ ಸೇರ್ಪಡೆಯಾಗಿದ್ದರೆ ಅಂತಹ ಆಸ್ತಿಗಳಿಗೆ ನಮೂನೆ 11 ನ್ನು ವಿತರಿಸಲಾಗುವುದು.

**7. ನಮೂನೆ–9/ನಮೂನೆ–11ನ್ನು ಯಾರು ನೀಡುವರು ?**

**<u>ಉತ್ತರ:</u>** ಗ್ರಾಮ ಪಂಚಾಯತ್ ಕಛೇರಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಾರ್ಯದರ್ಶಿಯವರು ನಮೂನೆ–9/ನಮೂನೆ–11ಅನ್ನು ನೀಡುವರು. ಮೊದಲನೇ ಬಾರಿಗೆ ನಮೂನೆ–9/ನಮೂನೆ–11ಅನ್ನು ಕೋರುವುದರೊಂದಿಗೆ ಇ–ಸ್ವತ್ತು ತಂತ್ರಾಂಶದ ಮೂಲಕ ಕಾರ್ಯ ಪ್ರಕ್ರಿಯೆಗಳು ಪ್ರಾರಂಭವಾಗುವವು. ತದನಂತರದಲ್ಲಿ ನಿಗಧಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದ ಮೂರು ದಿನದೊಳಗೆ ನಮೂನೆ–9/ನಮೂನೆ–11ಅನ್ನು ನೀಡಲಾಗುವುದು.

**8. ನಿಗಧಿತ ಶುಲ್ಕ ಪಾವತಿಸಿರುವುದಕ್ಕೆ ಸ್ವೀಕೃತಿಯನ್ನು ಪಡೆಯಬಹುದೇ ?**

**<u>ಉತ್ತರ:</u>** ನೀಡುವ ಪ್ರತಿಯೊಂದು ದಾಖಲೆಯೊಂದಿಗೆ ಜೊತೆಗೆ ಅದಕ್ಕೆ ಶುಲ್ಕ ಸಂಗ್ರಹಿಸುವುದರ ದಿನಾಂಕ ಮತ್ತು ಸ್ಥಳವನ್ನು ನಮೂದಿಸಲಾಗುವುದು.

**9. ಪರಿವರ್ತನಾ ಆದೇಶಗಳನ್ನು ಹೊರಡಿಸಲು ಯಾರು ಸಕ್ಷಮ ಪ್ರಾಧಿಕಾರವಾಗಿರುವರು ?**

**ಉತ್ತರ:** ಜಿಲ್ಲೆಯ ಜಿಲ್ಲಾಧಿಕಾರಿಯು (ಕಂದಾಯ ಇಲಾಖೆ) ಪರಿವರ್ತನ ಆದೇಶಗಳನ್ನು ಹೊರಡಿಸಲು ಸಕ್ಷಮ ಪ್ರಾಧಿಕಾರವಾಗಿರುವರು.

**10. ಲೇಔಟ್ ನಕ್ಷೆಯನ್ನು ಹೊರಡಿಸಲು ಯಾರು ಸೂಕ್ತ ಪ್ರಾಧಿಕಾರವಾಗಿರುವರು ?**

**<u>ಉತ್ತರ:</u>** ಕರ್ನಾಟಕ ಗ್ರಾಮೀಣ ಮತ್ತು ನಗರ ಯೋಜನೆ ಅಧಿನಿಯಮ, 1961 ರನ್ವಯ ರಚಿಸಿರುವ ಸಂಬಂಧಪಟ್ಟ ನಗರ ಯೋಜನಾ ಪ್ರಾಧಿಕಾರವು ಲೇಔಟ್ ನಕ್ಷೆಯನ್ನು ಅನುಮೋದಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಅವರ ಅನುಪಸ್ಥಿತಿಯ ಸಂದರ್ಭದಲ್ಲಿ ನಿರ್ದೇಶಕರು, ನಗರ ಯೋಜನೆ ಅವರು ಸಕ್ಷಮ ಪ್ರಾಧಿಕಾರವಾಗಿರುತ್ತಾರೆ.

**11. ಗ್ರಾಮ ಪಂಚಾಯತ್‌ಗಳಿಂದ ನೀಡಿದ ನಮೂನೆ–9 ಮತ್ತು ನಮೂನೆ–11 ಗಳಲ್ಲಿ ಇಂಕ್‌ಸಹಿ ಇರಬೇಕೆ ?**

**<u>ಉತ್ತರ:</u>** ಇಲ್ಲ. ದಿನಾಂಕ:15.06.2003ರ ನಂತರದಲ್ಲಿ ಗ್ರಾಮ ಪಂಚಾಯತ್‌ಗಳಿಂದ ನೀಡುವ ನಮೂನೆ–9/ನಮೂನೆ–11 ಗಳಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿ ಇರುತ್ತದೆ. ಆದ್ದರಿಂದ ದಾಖಲೆಗಳಿಗೆ ಗ್ರಾಮ ಪಂಚಾಯತ್ ಅಧಿಕಾರಿಯ ಇಂಕ್ ಸಹಿಯ ಅವಶ್ಯಕತೆ ಇರುವುದಿಲ್ಲ.

**12. ಇ–ಸ್ವತ್ತು ಮೂಲಕ ನೀಡಲಾಗುವ ನಮೂನೆ–9/ನಮೂನೆ–11ರಲ್ಲಿರುವ "ಪ್ರಮಾಣ ಪತ್ರದ ಕ್ರಮ ಸಂಖ್ಯೆ" ಯ ಮಹತ್ವ ಏನು ?**

**ಉತ್ತರ:** ನೀಡುವ ಪ್ರತಿಯೊಂದು ದಾಖಲೆಗಳಲ್ಲಿ ವಿಶಿಷ್ಟ ದೃಢೀಕರಣ ಸಂಖ್ಯೆ ಇದ್ದು ಅದನ್ನು "ಪ್ರಮಾಣ ಪತ್ರದ ಕ್ರಮ ಸಂಖ್ಯೆ" ಶೀರ್ಷಿಕೆಯಡಿ ಮುದ್ರಿಸಲಾಗಿರುತ್ತದೆ. ಈ ದೃಢೀಕರಣ ಸಂಖ್ಯೆಯನ್ನು ದಾಖಲೆಯ ನೈಜತೆಯನ್ನು ಪರಿಶೀಲಿಸಲು ಬಳಸಬಹುದಾಗಿರುತ್ತದೆ.

**13. ಗ್ರಾಮ ಪಂಚಾಯತಿಯಿಂದ ನೀಡಲಾಗುವ ನಮೂನೆ–9/ನಮೂನೆ–11ರ ನೈಜತೆಯನ್ನು ಹೇಗೆ ಪರಿಶೀಲಿಸಬಹುದು ?**

**ಉತ್ತರ:** ಸುಭದ್ರಿತವಾದ ಲೇಖನ ಸಾಮಗ್ರಿಗಳಿಂದ ನಮೂನೆ–9/ನಮೂನೆ–11ಗಳನ್ನು ಹೊರಡಿಸಲಾಗಿದ್ದು, ಆ ಪ್ರಮಾಣ ಪತ್ರದ ಮೇಲೆ ಹೋಲೋಗ್ರಾಮ್ ಅಂಟಿಸಲಾಗಿರುತ್ತದೆ. ನಮೂನೆ–9/ನಮೂನೆ–11ಅನ್ನು ಹೊರಡಿಸಲಾಗುವ ಕಾಗದ ಪತ್ರಗಳಲ್ಲಿ ಯಾರೊಬ್ಬರಾದರು ವಾಟರ್ ಮಾರ್ಕ್‌ನ್ನು ನೋಡಲು ಸಾಧ್ಯವಿರುತ್ತದೆ ಹಾಗೂ ಪ್ರತಿಯೊಂದು ಕಾಗದ ಪತ್ರವನ್ನು ಸಂಖ್ಯೀಕರಣಗೊಳಿಸಲಾಗಿದ್ದು ಅದನ್ನು ಪತ್ರದ ಬಲಭಾಗದ ಮೇಲ್ತುದಿಯಲ್ಲಿ ಮುದ್ರಿಸಲಾಗಿರುತ್ತದೆ. ಸುಭದ್ರಿತವಾದ ಲೇಖನ ಸಾಮಗ್ರಿಗಳ ಹಾಗೂ ಹೋಲೋಗ್ರಾಮ್ ಹೊಂದಿರುವ ಪ್ರಮಾಣ ಪತ್ರಗಳನ್ನು ನೀಡುವ ಪದ್ಧತಿಯು ಪ್ರಸ್ತುತ ಬೆಂಗಳೂರು(ನಗರ), ಬೆಂಗಳೂರು(ಗ್ರಾಮಾಂತರ) ಮತ್ತು ರಾಮನಗರ ಜಿಲ್ಲೆಗಳಲ್ಲಿ ಮಾತ್ರ ಚಾಲ್ತಿಯಲ್ಲಿರುತ್ತದೆ. ಬೆಂಗಳೂರು(ನಗರ), ಬೆಂಗಳೂರು(ಗ್ರಾಮಾಂತರ) ಮತ್ತು ರಾಮನಗರ ಜಿಲ್ಲೆಗಳು ಸೇರಿದಂತೆ ಎಲ್ಲಾ ಜಿಲ್ಲೆಗಳಿಗೂ ದಾಖಲೆಯ ನೈಜ್ಯತೆಯನ್ನು ಪರಿಶೀಲಿಸುವ ಸೌಲಭ್ಯಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದನ್ನು ಇ–ಸ್ವತ್ತು ಮುಖ ಪುಟದಲ್ಲಿನ **"Verify Document /ದಾಖಲೆ ಪರಿಶೀಲಿಸು"** ಈ ಲಿಂಕ್ ಮೇಲೆ ಕ್ಲಿಕ್ ಮಾಡುವುದರಿಂದ ಪಡೆಯಬಹುದು ಹಾಗೂ ತಂತ್ರಾಂಶವು ಪ್ರಮಾಣ ಪತ್ರದ ಉತ್ಪನ್ನಕ್ಕೆ ದಾರಿ ಮಾಡುವುದು. ಪ್ರಮಾಣ ಪತ್ರಕ್ಕೆ ಸಂಖ್ಯೆಯನ್ನು ನೀಡಿದ ನಂತರ ತುಲನೆ ಮಾಡುವ ಸಲುವಾಗಿ ನೀಡಿರುವ ಮೂಲ ಪ್ರಮಾಣ ಪತ್ರವನ್ನು ತೋರಿಸುವುದು.

**14. ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಬಹುದಾದ ಇತರೆ ಯಾವುದಾದರು ವಿಧಾನಗಳಿವೆಯೇ ?**

<u>ಉತ್ತರ:</u> ಹೌದು, ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿ ಹೊಂದಿರುವ ಪ್ರಮಾಣ ಪತ್ರದ ಮೇಲಿನ **"2d-barcode"** ಓದುವ/ಗುರುತಿಸುವ ಮೂಲಕ ಪ್ರಮಾಣ ಪತ್ರದ ನೈಜತೆಯನ್ನು ಪರಿಶೀಲಿಸಬಹುದಾಗಿದೆ. ಅನುಸರಿಸಬೇಕಾದ ವಿಧಿವಿಧಾನಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಶಾಖೆಯ ವತಿಯಿಂದ ಶೀಘ್ರದಲ್ಲಿಯೇ ಪ್ರಕಟಿಸಲಾಗುವುದು.

***